
ಸಂಬಂಧಗಳಿವೆ. ಇರಾನಿನ ರಾಷ್ಟ್ರ ಭಾಷೆ ಫಾರಸಿಯು ಸಂಸ್ಕೃತವೂ ಒಂದೇ ಕುಟುಂಬಕ್ಕೆ ಸೇರಿದವು. ಇರಾನ್ ಶಬ್ದವು ಆರ್ಯನ್ ಶಬ್ದದ ಫಾರಸಿ ರೂಪ. (ನಾವು ಮಶಾದ್‌ನಲ್ಲಿ ಉಳಿದುಕೊಂಡಿದ್ದ ಹೋಟೆಲಿನ ಹೆಸರು ಆರ್ಯನ್) ಭಾರತಕ್ಕೆ ಆರ್ಯರು ಸೆಂಟ್ರಲ್ ಏಶಿಯಾದಿಂದ ಇರಾನಿನ ಮೂಲಕ ವಲಸೆ ಬರುವಾಗ ಈ ಅಗ್ನಿ ಸಂಸ್ಕೃತಿಯನ್ನೂ ಭಾರತಕ್ಕೆ ತಂದರು ಎಂಬ ವಾದವಿದೆ. ಭಾರತದ ಅನೇಕ ದೊರೆಗಳ ಮೂಲವು ಇರಾನಿನಲ್ಲಿದೆ. ಬಿಜಾಪುರದ ಆದಿಲಶಾಹಿ ಮನೆತನದ ಮೊದಲ ದೊರೆ ಯೂಸೂಫ್ ಸಾನಿ, ಬಹಮನಿಯ ಪ್ರಧಾನಮಂತ್ರಿ ಶಿಕ್ಷಣ ತಜ್ಞ ಮಹಮೂದನು ಗವಾನ್ ಇರಾನಿನವರು. ಬೆಂಗಳೂರಿನ ಕ್ರಿಕೆಟಿಗ ಸೈಯದ್ ಅಲಿ ಕಿರ್ಮಾನಿ, ಮೈಸೂರಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಪೂರ್ವಜರು ಇರಾನಿನಿಂದ ಬಂದವರು. ಭಾರತವನ್ನು ಆಳಿದ ಮೊಗಲರ ಆಡಳಿತ ಭಾಷೆ ಫಾರಸಿಯಾಗಿತ್ತು. ಈಗಲೂ ಕನ್ನಡದಲ್ಲಿರುವ ರೆವಿನ್ಯೂ ಪರಿಭಾಷೆಯಲ್ಲಿ ಸಾವಿರಾರು ಫಾರಸಿ ಶಬ್ದಗಳಿವೆ: ಅರ್ಜಿ, ಹುಕುಂ, ತಹಸಿಲ್ದಾರ್, ಶಿರಸ್ತೇದಾರ್, ಜಮಾಬಂದಿ, ನಗದು, ಖುಷ್ಕಿ, ತರಿ ಇತ್ಯಾದಿ. ಆಡಳಿತಕ್ಕಿಂತ ಮುಖ್ಯವಾದುದು ಭಾರತ ಇರಾನ್ ನಡುವೆ ನಡೆದ ಸಾಂಸ್ಕೃತಿಕ ವಿನಿಮಯ. ಇರಾನ್ ಸೂಫಿ ಸಂತರ ನಾಡು. ಅಲ್ಲಿನ ಸೂಫಿಗಳು ಭಾರತಕ್ಕೆ ತತ್ವಶಾಸ್ತ್ರವನ್ನು ಕಲಿಯಲು ಬರುತ್ತಿದ್ದರು. ಭಾರತದ ಉಪನಿಷತ್ತುಗಳನ್ನು ರಾಜಕುಮಾರ ದಾರಾಶುಕೂ ಫಾರಸಿಗೆ ಅನುವಾದಿಸಿದನು. ರಾಮಾಯಣ, ಮಹಾಭಾರತಗಳು ಫಾರಸಿಗೆ ಹೋದವು. ಈಗಲೂ ಇರಾನಿನ ವಿಶ್ವವಿದ್ಯಾಲಯಗಳಲ್ಲಿ ಭಾರತದ ಇಬ್ಬರು ಫಾರಸಿ ಲೇಖಕರನ್ನು ಅಧ್ಯಯನ ಮಾಡಲಾಗುತ್ತದೆ. ಅವರೆಂದರೆ ಚಂದ್ರಭಾನ್ ಬಹಮನ್ ಮತ್ತು ಇಕ್ಬಾಲ್.

ಇದಕ್ಕೆ ಪ್ರತಿಯಾಗಿ ಭಾರತವು ಇರಾನಿನಿಂದ ತತ್ವಜ್ಞಾನವನ್ನು ಗಣಿತವನ್ನು ಕಾವ್ಯವನ್ನು ಅನುವಾದಿಸಿಕೊಂಡಿತು. ಕರ್ನಾಟಕದ ಬಿದರಿ ಕುಶಲಕಲೆ, ಕಾಶ್ಮೀರದ ರತ್ನಗಂಬಳಿ ಕಲೆ ಇರಾನಿನಿಂದ ಬಂದವು. ಡಿವಿಜಿಯವರು ಉಮರ ಖಯಾಮನ ಒಸಗೆಯನ್ನು ಅನುವಾದಿಸುವಾಗ, ಅವನ ದರ್ಶನವು ವೇದಾಂತ ತತ್ವಕ್ಕೆ ಹತ್ತಿರವಾಗಿದೆ ಎನ್ನುತ್ತಾರೆ. ಬೇಂದ್ರೆಯವರು ಕೂಡ ಉಮರನನ್ನು ಕನ್ನಡಿಸಿದರು. ಉಮರನ ರೂಪಾಂತರವಾಗಿರುವ ಅವರ ಬೆಳಗುಜಾವ ಕವನದಲ್ಲಿ, 'ಈ ತುಂಬಿ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು' ಎಂಬ ಸಾಲಿದೆ. ಉಮರನ ಚಾರ್ವಾಕ ಪ್ರಜ್ಞೆಯ ಜೀವನಪ್ರೀತಿ ಬೇಂದ್ರೆಯವರಿಗೆ ಪ್ರಿಯವಾಗಿತ್ತು. ಪ್ರಾಚೀನ ಜಗತ್ತಿನಲ್ಲಿ ಗ್ರೀಸ್ ಬಿಟ್ಟರೆ ಜಗತ್ತಿನಲ್ಲಿ ಅತಿಹೆಚ್ಚು ತತ್ವಜ್ಞಾನಿಗಳು, ಕವಿಗಳು, ವಿಜ್ಞಾನಿಗಳು ಇರಾನಿನಲ್ಲಿ ಮೂಡಿದರು. ಹಫೀಜ್ ಉಮರ್ ಸಾದಿ ಫಿರ್ದೂಸಿ ಅವರ ಪ್ರಮುಖ ಕವಿಗಳು. 11ನೇ ಶತಮಾನದಲ್ಲಿದ್ದು ಶಾಹನಾಮ ಬರೆದ ಫಿರ್ದೂಸಿ ಇರಾನಿಗರ ಪ್ರಿಯ ಕವಿ. ಅವರಿಗೆ ತಮ್ಮ ದಾರ್ಶನಿಕರು ಹಾಗೂ ಕವಿಗಳ ಬಗ್ಗೆ ಗೌರವ. ಫಿರ್ದೂಸಿಯ ಪ್ರತಿಮೆ ನಿಲ್ಲಿಸಿ, ಅವನ ಸಮಾಧಿಯನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡಿದ್ದಾರೆ. ತೆಹರಾನಿನ ಮೀಲಾದ್ ಟವರಿನ ಕೊನೆಯ ಅಂತಸ್ತಿನಲ್ಲಿ, ಇರಾನಿನ ಎಲ್ಲ ದಾರ್ಶನಿಕರ, ಕವಿಗಳ, ವಿಜ್ಞಾನಿಗಳ, ಕ್ರೀಡಾಪಟುಗಳ ಪಟಗಳನ್ನಿಟ್ಟು, ಅವರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ದಾಖಲಿಸಿದ್ದಾರೆ. ಸೂಫಿ ಕವಿಗಳ ಚಿತ್ರಪಟಗಳ ಬದಿ ಅವರ ಕಾವ್ಯದ


ತೆಹರಾನಿಗೆ ಪ್ರವಾಸ ಬಂದಿದ್ದ ಶಾಲಾ ಮಕ್ಕಳು


ಚರ್ಮದ ಚೀಲದಲ್ಲಿ ನೀರು ಹೊತ್ತ ಮುದುಕನ ಪ್ರತಿಮೆ


ಬಸ್ತಾಂ ನಗರದ ಚೌಕ